ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.**262/2023**

| | | |
|---|---|---|
| ಸಾಕ್ಷಿದಾರರ ಹೆಸರು | ನವೀನ್ | ಸಿ.ಡಬ್ಲ್ಯೂ: 7 ಪಿ.ಡಬ್ಲ್ಯೂ: 4 |
| ತಂದೆಯ ಹೆಸರು | ಕೆ.ಹೆಚ್. ಚಳಗಿರಿ | |
| ವಯಸ್ಸು | 45 ವರ್ಷ | |
| ಉದ್ಯೋಗ | ಮುಖ್ಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್ | |
| ವಾಸಸ್ಥಳ | ದೇವಕೊಟ್ಟೈ, ಶಿವಗಂಗ ಜಿಲ್ಲೆ, ತಮಿಳ್ ನಾಡು ರಾಜ್ಯ. | |

ದಿನಾಂಕ: 24.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ** ಪ್ರಭಾರ **ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಗೊತ್ತು. ಚಾಸಾ.1 ರವರು ನಮ್ಮ ಬ್ಯಾಂಕಿಗೆ ಹಾಜರಾಗಿ ಅವರ ಖಾತೆಯಿಂದ ಹಣವನ್ನು ಯಾರೋ ವರ್ಗಾವಣೆ ಮಾಡಿದ್ದಾರೆ ಎಂದು ಹೇಳಿದರು. ನಾವು ಆ ಬಗ್ಗೆ ಪೊಲೀಸರಿಗೆ ದೂರನ್ನು ನೀಡುವಂತೆ ಆಕೆಗೆ ತಿಳಿಸಿದ್ದೆವು. ನಂತರ ಪೊಲೀಸರಿಂದ ನಮಗೆ ಗೋಣಿಬೀಡು ಶಾಲೆಯ ಅಕ್ಷರ ದಾಸೋಹದ ಖಾತೆ ಯಾವಾಗ ತೆರೆಯಲಾಗಿದೆ ಮತ್ತು ಆ ಖಾತೆಯ ಸಂಬಂಧಿಸಿದಂತೆ ಇತರೆ ವಿವರವನ್ನು ಕೋರಿ ಪತ್ರವನ್ನು ಬರೆದಿದ್ದರು. ಆ ಪತ್ರಕ್ಕೆ ನಾವು ಉತ್ತರವನ್ನು ನೀಡಿದ್ದೆವು. ಆ ಖಾತೆಯ account statement, ಆ ಖಾತೆಯನ್ನು ಯಾರು ನಿರ್ವಹಿಸುತ್ತಿದ್ದರು, ಮೊಬೈಲ್ ಬ್ಯಾಂಕಿಂಗ್ ಮೂಲಕ ನಿರ್ವಹಿಸುತ್ತಿದ್ದರಾ, ಯಾವ ಮೊಬೈಲ್ ನಂಬರ್ ಮೂಲಕ ನಿರ್ವಹಿಸುತ್ತಿದ್ದರು ಎಂಬ ವಿವರವನ್ನು ಪೊಲೀಸರು ಕೇಳಿದ್ದರು. ನಮ್ಮ ಸಿಸ್ಟಮ್ ಗಳಲ್ಲಿ ಪರಿಶೀಲಿಸಿ ಆ ಪತ್ರಕ್ಕೆ ಸರಿಯಾದ ಉತ್ತರವನ್ನು ದಾಖಲೆಗಳ ಮೂಲಕ ಒದಗಿಸಿದ್ದೆವು.

2. ಪೊಲೀಸರು ಮಾಹಿತಿ ಕೋರಿ ಸಲ್ಲಿಸಿದ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.15 ಎಂದು ಗುರುತಿಸಲಾಯಿತು. (ಸದರಿ ದಾಖಲೆಯನ್ನು ಆರೋಪಿ

ಪರ ವಕೀಲರ ತಕರಾರಿನ ಮೆರೆಗೆ ರುಜುವಾತು ಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ನಿಶಾನೆಯಾಗಿ ಗುರುತಿಸಲಾಯಿತು.) ಪೊಲೀಸರು ನೀಡಿದ ಪತ್ರಕ್ಕೆ ಉತ್ತರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.16 ಎಂದು, ಅಕ್ಷರ ದಾಸೋಹ (ಎಂ.ಎಂ.ಎಸ್) ಗೋಣಿಬೀಡು ಶಾಲೆಗೆ ಸಂಬಂಧಿಸಿದ ಖಾತೆಯನ್ನು ತೆರೆಯಲು ಕೆ.ವೈ.ಸಿ ಗಾಗಿ ಶಿವೇಗೌಡರವರು ಸಲ್ಲಿಸಿದ ಸದಸತ್ವ ಗುರುತಿನ ಚೀಟಿ, ವಹಿದಾ ಬಾನು ರವರ ಗುರುತಿನ ಚೀಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.17 ಎಂದು, ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ statement of account extract ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ.ಪಿ.18 ಎಂದು, ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆಯಿಂದ ಮೊಬೈಲ್ ಬ್ಯಾಂಕಿಂಗ್ ಮೂಲಕ ಹಣ ವರ್ಗಾವಣೆಯಾದ statement ಅನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.19 ಎಂದು ಗುರುತಿಸಲಾಯಿತು (ಸದರಿ ದಾಖಲೆಯನ್ನು ಆರೋಪಿ ಪರ ವಕೀಲರ ತಕರಾರಿನ ಮೆರೆಗೆ ರುಜುವಾತು ಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ನಿಶಾನೆಯಾಗಿ ಗುರುತಿಸಲಾಯಿತು).

3. ಆ ಶಾಲೆಯ ಮುಖ್ಯೋಪಧ್ಯಾಯಾರಾದ ಚಂದ್ರಮ್ಮ, ಜಿ.ಎಂ.ಹೆಚ್.ಪಿ.ಎಸ್ ಶಾಲೆಯ ಅಧ್ಯಕ್ಷರು ಮತ್ತು ಹೆಡ್ ಕುಕ್ ಆದ ವಹಿದಾ ಬಾನು ರವರ ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆಯನ್ನು ತೆರೆಯಲು ಅರ್ಜಿಯ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.20 ಎಂದು, ಮುಖ್ಯೋಪಧ್ಯಾಯಾರಾದ ಚಂದ್ರಮ್ಮ, ಜಿ.ಎಂ.ಹೆಚ್.ಪಿ.ಎಸ್ ಶಾಲೆಯ ಅಧ್ಯಕ್ಷರು ಮತ್ತು ಹೆಡ್ ಕುಕ್ ಆದ ವಹಿದಾ ಬಾನು ರವರು ಸಲ್ಲಿಸಿರುವ ಫಾರಂ ನಂಬರ್ 60 ಯ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.21 ಎಂದು, ಹೆಡ್ ಕುಕ್ ಆ ವಹಿದಾ ಬಾನು ರವರು ನಮ್ಮ ಬ್ಯಾಂಕಿನಲ್ಲಿ ಖಾತೆ ತೆರೆಯಲ್ಲಿ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.22

ಎಂದು ಗುರುತಿಸಲಾಯಿತು.

4. ಹೆಡ್ ಕುಕ್ ಆ ವಹಿದಾ ಬಾನು ರವರ ವಿವರವನ್ನು ಕೋರಿ ಗೋಣಿಬೀಡು ಪೊಲೀಸರು ಸಲ್ಲಿಸಿದ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.23 ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ನಾವು ನೀಡಿದ ಉತ್ತರ ಎಂದು ಸಾಕ್ಷಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.24 ಎಂದು, ವಹಿದಾ ಬಾನು ರವರು ಮತದಾನದ ಗುರುತಿನ ಚೀಟಿಯ ದೃಢೀಕೃತ ನಕಲು ಮತ್ತು ವಹಿದಾ ಬಾನು ರವರ ಖಾತೆಯ statement of account extract ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.25 ಮತ್ತು 26 ಎಂದು ಗುರುತಿಸಲಾಯಿತು.

5. ದಿಃ 27.02.2023 ರಂದು ಗೋಣಿಬೀಡು ಪೊಲೀಸರಿಗೆ ನಾವು ನೀಡಿದ ಉತ್ತರ ಎಂದು ಸಾಕ್ಷಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.27 ಎಂದು ಗುರುತಿಸಲಾಯಿತು. ದಿಃ 29.09.2022 ರಂದು ಗೋಣಿಬೀಡು ಪೊಲೀಸರಿಗೆ ನೀಡಿದ 2 ಪ್ರತ್ಯುತ್ತರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.28 ಮತ್ತು 29 ಎಂದು ಗುರುತಿಸಲಾಯಿತು. ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆಯಿಂದ ಮೊಬೈಲ್ ಬ್ಯಾಂಕಿಂಗ್ ಮೂಲಕ ಹಣ ವರ್ಗಾವಣೆಯಾದ statement ಅನ್ನು ಹಾಜರು ಮಾಡಿದ್ದು ಅದನ್ನು ನಿ.ಪಿ.30 ಎಂದು ಗುರುತಿಸಲಾಯಿತು (ನಿ.ಪಿ.30 ದಾಖಲೆಯನ್ನು ಆರೋಪಿ ಪರ ವಕೀಲರ ತಕರಾರಿನ ಮೇರೆಗೆ ರುಜುವಾತು ಪಡಿಸುವ ಹೊಣೆಗಾರಿಕೆಗೆ ಒಳಪಟ್ಟು ನಿಶಾನೆಯಾಗಿ ಗುರುತಿಸಲಾಯಿತು).

6. ದಿಃ 27.02.2023 ರಂದು ಗೋಣಿಬೀಡು ಪೊಲೀಸರಿಗೆ ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆಗೆ ಸಂಬಂಧಿಸಿದಂತೆ ನೀಡಿದ ವಿವರದ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.31 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ಕೆ.ಎಂ.ಪಿ. ವಕೀಲರಿಂದ – ಆರೋಪಿತನ ಪರವಾಗಿ</u>

7. ಬ್ಯಾಂಕಿನಲ್ಲಿ ಹೊಂದಿರುವ ಖಾತೆಯನ್ನು ಮೊಬೈಲ್ ಬ್ಯಾಂಕಿಂಗ್ ಮೂಲಕ ನಿರ್ವಹಿಸಲು ಎ.ಟಿ.ಎಂ ಕಾರ್ಡಿನ ಅವಶ್ಯಕತೆ ಇರುತ್ತದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಎ.ಟಿ.ಎಂ ನ ಅವಶ್ಯಕತೆ ಇರಲಿಲ್ಲ, ಈಗ ಅದರ ಅವಶ್ಯಕತೆ ಇರುತ್ತದೆ ಎಂದು ನುಡಿಯುತ್ತಾರೆ. ಮೊಬೈಲ್ ಬ್ಯಾಂಕಿಂಗ್ ಮೂಲಕ ಖಾತೆಯನ್ನು ನಿರ್ವವುಸಲು ಎ.ಟಿ.ಎಂ ನ ಅವಶ್ಯಕತೆ ಇರುತ್ತದೆ ಎಂದು ಯಾವ ಸಮಯದಿಂದ ಜಾರಿಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಬ್ಯಾಂಕಿನಲ್ಲಿ ಹೊಂದಿರುವ ಖಾತೆಯನ್ನು ಮೊಬೈಲ್ ಬ್ಯಾಂಕಿಂಗ್ ಮೂಲಕ ನಿರ್ವಹಿಸಲು ಎ.ಟಿ.ಎಂ ಕಾರ್ಡಿನ ಅವಶ್ಯಕತೆ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊಬೈಲ್ ನಲ್ಲಿ ಬ್ಯಾಂಕಿನ ಖಾತೆಯನ್ನು ನಿರ್ವಹಿಸಲು ಬ್ಯಾಂಕಿನ ಅದಿಕೃತ ಆಫ್ ಅನ್ನು ಮೊಬೈಲ್ ನಲ್ಲಿ ಅಳವಡಿಸಿಕೊಳ್ಳಬೇಕು ಎಂದರೆ ಸರಿ. ಸ್ಮಾರ್ಟ್ ಫೋನ್ ಗಳಲ್ಲಿ ಮಾತ್ರ ಮೊಬೈಲ್ ಬ್ಯಾಂಕಿಂಗ್ ಆಫ್ ಅನ್ನು ಅಳವಡಿಸಿಕೊಳ್ಳಬಹುದು ಎಂದರೆ ಸರಿ. ಮೊಬೈಲ್ ನಲ್ಲಿ ಬ್ಯಾಂಕಿನ ಅದಿಕೃತ ಆಫ್ ಅನ್ನು ಅಳವಡಿಸಿಕೊಳ್ಳಲು ಆ ಮೊಬೈಲ್ Android 7.0 and above ಮತ್ತು IOS 17.0 and above ಇರಬೇಕು ಎಂದರೆ ನನಗೆ ಮಾಹಿತಿ ಇಲ್ಲ. ಖಾತೆಯನ್ನು ಮೊಬೈಲ್ ನಲ್ಲಿ ನಿರ್ವಹಿಸಲು internet ನ ಅವಶ್ಯಕತೆ ಇದೆ ಎಂದರೆ ಸರಿ. ಮೊಬೈಲ್ ಬ್ಯಾಂಕಿಂಗ್ ಮೂಲಕ ಖಾತೆಯನ್ನು ನಿರ್ವಹಿಸಲು ಖಾತೆಯಲ್ಲಿ ಸಾಕಷ್ಟು ಹಣ ಇರಬೇಕು ಎಂದರೆ ಸಾಕ್ಷಿ ಖಾತೆಯಲ್ಲಿ ಸಾಕಷ್ಟು ಹಣ ಇರಬೇಕು ಎಂಬ ನಿಯಮ ಇಲ್ಲ ಎಂದು ನುಡಿಯುತ್ತಾರೆ. ಮೊಬೈಲ್ ಬ್ಯಾಂಕಿಂಗ್ ಮೂಲಕ ಖಾತೆಯನ್ನು ನಿರ್ವಹಿಸಲು ಸಾಕಷ್ಟು ಹಣದ ಅವಶ್ಯಕ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಮೊಬೈಲ್ ನಲ್ಲಿ ಬ್ಯಾಂಕಿನ ಅದಿಕೃತ ಆಫ್ ಅನ್ನು ಅಳವಡಿಸಿಕೊಳ್ಳಲು ಆ ಮೊಬೈಲ್ ನಲ್ಲಿ ಸಾಕಷ್ಟು storage ನ ಅವಶ್ಯಕತೆ ಇದೆ ಎಂದರೆ ಸರಿ. ಬ್ಯಾಂಕಿನ ಅದಿಕೃತ ಆಫ್ ಅನ್ನು ನೊಂದಾವಣಿ ಮಾಡಿಸಲು ಖಾತೆಯ ಸಂಖ್ಯೆ,

user name ಮತ್ತು password ನ ಅವಶ್ಯಕತೆ ಇದೆ ಎಂದರೆ ಸರಿ. ಮೊಬೈಲ್ ನಲ್ಲಿ ಖಾತೆಯನ್ನು ತೆರೆಯಲು ಖಾತೆದಾರರ ರಿಜಿಸ್ಟರ್ ನಂಬರ್ ಸಹ ಬೇಕಾಗುತ್ತದೆ ಎಂದರೆ ಸರಿ. ಖಾತೆಯನ್ನು ಮೊಬೈಲ್ ನಲ್ಲಿ ತೆರೆಯಲು OTP ಯ ಅವಶ್ಯಕತೆ ಇರುತ್ತದೆ ಎಂದರೆ ಸರಿ.

9. 2008 ರಿಂದ ಬ್ಯಾಂಕಿನ ಖಾತೆದಾರರಿಗೆ ಎಸ್.ಎಂ.ಎಸ್ ಮೂಲಕ ಖಾತೆಯ ವಿವರವನ್ನು ತಿಳಿಸಲಾಗುತ್ತಿದೆ ಎಂದರೆ ಸರಿ. 1998 ರಿಂದ ಖಾತೆಗೆ ಸಂಬಂಧಿಸಿದಂತೆ KYC ಮಾಡಬೇಕೆಂಬ ನಿಯಮ ಆರಂಭವಾಗಿದೆ ಎಂದರೆ ಸಾಕ್ಷಿ ನನಗೆ ತಿಳಿದಿರುವಂತೆ 2002 ರಿಂದ ಆ ನಿಯಮ ಆರಂಭವಾಗಿದೆ ಎಂದು ನುಡಿಯುತ್ತಾರೆ. ಜಂಟಿ ಖಾತೆಗೆ ಸಂಬಂಧಿಸಿದಂತೆ 3 ವಿದಗಳು ಇವೆ ಎಂದರೆ ಸಾಕ್ಷಿ 2 ವಿದಗಳು ಇವೆ ಎಂದು ನುಡಿಯುತ್ತಾರೆ. ಜಂಟಿ ಖಾತೆಯಲ್ಲಿ either or survivor ಎಂಬುದು ಇದೆ ಎಂದರೆ ಸರಿ. ಮತ್ತೊಂದು any one or survivor ಎಂಬುದು ಇದೆ ಎಂದರೆ ಸಾಕ್ಷಿ ಮೊದಲು ಹೇಳಿದ either or survivor ಮತ್ತು ಈಗ ಹೇಳಿದ any one or survivor ಎಂಬುದು ಎರಡು ಒಂದೇ ಎಂದು ನುಡಿಯುತ್ತಾರೆ. either or survivor ಎಂಬ ಖಾತೆಯನ್ನು ಯಾರಾದರು ನಿರ್ವಹಿಸಬಹುದು ಎಂದರೆ ಸರಿ. ಜಂಟಿ ಖಾತೆಯಲ್ಲಿ ಮತ್ತೊಂದು ವಿದ ಇಬ್ಬರು ಜೊತೆಯಾಗಿ ನಿರ್ವಹಿಸುವ ಖಾತೆ ಎಂದರೆ ಸರಿ.

10. ಇಬ್ಬರಿಗಿಂತ ಹೆಚ್ಚು ಜನ ಖಾತೆದಾರರು ಇರುವ ಜಂಟಿ ಖಾತೆಯನ್ನು ಮೊದಲ ವ್ಯಕ್ತಿ 2 ಮತ್ತು 3ನೇ ವ್ಯಕ್ತಿಯ ಜೊತೆ ಕೂಡಿ ಖಾತೆಯನ್ನು ನಿರ್ವಹಿಸಬಹುದು ಎಂದರೆ ಸರಿ. ಜಂಟಿ ಖಾತೆಯನ್ನು ನಿರ್ವಹಿಸಲು ಸದರಿ ಖಾತೆ ತೆರೆಯುವಾಗ ಆ ಬಗ್ಗೆ ತಿಳಿಸಬೇಕು ಎಂದರೆ ಸರಿ.

11. ಚಾಸಾ.1 ರವರು ಯಾವ ದಿನಾಂಕದಂದು ನಮ್ಮ ಬ್ಯಾಂಕಿಗೆ ಬಂದಿದ್ದರು ಎಂದು ನನಗೆ ನೆನಪಿಲ್ಲ. ಚಾಸಾ.1 ರವರಿಗೆ ದೂರನ್ನು ನೀಡುವಂತೆ ತಿಳಿಸಿದ ದಿನಾಂಕ ನನಗೆ ನೆನಪಿಲ್ಲ. ಚಾಸಾ.1 ರವರು ಆ ದಿನ ನಮ್ಮ ಬ್ಯಾಂಕಿಗೆ ಬಂದಾಗ ಅವರು ಖಾತೆಯ ವಿವರವನ್ನು ಕೇಳಿ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ.1 ರವರು ನನ್ನ ಬಳಿ ವೈಯಕ್ತಿಕವಾಗಿ ಬಂದಿರಲಿಲ್ಲ. ಚಾಸಾ.1 ರವರು ಆ ದಿನ

ನಮ್ಮ ಬಳಿ ಬಂದಿದ್ದರು, ಖಾತೆಯಲ್ಲಿ ಅಕ್ರಮ ವರ್ಗಾವಣೆಯಾಗಿದೆ ಎಂದು ತಿಳಿಸಿದ್ದರು ಮತ್ತು ನಾವು ಆಕೆಗೆ ಪೊಲೀಸರಿಗೆ ದೂರನ್ನು ನೀಡುವಂತೆ ತಿಳಿಸಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಪೊಲೀಸರು ನಮಗೆ ಸಲ್ಲಿಸಿದ ಪತ್ರ ಬಂದ 2 ತಿಂಗಳ ಬಳಿಕ ನಾನು ಮಾಹಿತಿಯನ್ನು ಪೊಲೀಸರಿಗೆ ನೀಡಿದ್ದೇನೆ ಎಂದರೆ ಸರಿ. ಪೊಲೀಸರಿಂದ ಪತ್ರ ಬಂದ ನಂತರ ನಾನು ನನ್ನ ಮೇಲಾಧಿಕಾರಿಗಳ ಜೊತೆ ಇ-ಮೇಲ್ ನಲ್ಲಿ ವಿಚಾರವನ್ನು ತಿಳಿಸಿದ್ದೇನೆ. ನನ್ನ ಮೇಲಾಧಿಕಾರಿಗಳು ಯಾವ ರೀತಿ ಉತ್ತರವನ್ನು ಪೊಲೀಸರ ಪತ್ರದ ಮೂಲಕ ತಿಳಿಸಬೇಕು ಎಂದು ಇ-ಮೇಲ್ ಮೂಲಕ ತಿಳಿಸಿಲ್ಲ. ನನ್ನ ಮೇಲಾಧಿಕಾರಿಗಳಿಗೆ ನಾನು ಇ-ಮೇಲ್ ಮೂಲಕ ತಿಳಿಸಿದ ಇ-ಮೇಲ್ ನ ಪ್ರತಿಯನ್ನು ಪೊಲೀಸರಿಗೆ ನೀಡಿಲ್ಲ. ಪೊಲೀಸರಿಗೆ ನಮ್ಮ ಮೇಲಾಧಿಕಾರಿಗಳಿಂದ ಇ-ಮೇಲ್ ಮೂಲಕ ಕೋರಿ ನಂತರ ಉತ್ತರ ನೀಡುತ್ತೇವೆ ಎಂದು ತಿಳಿಸಿದ್ದೆವು. ಮೇಲಾಧಿಕಾರಿಗಳ ಜೊತೆ ನಾನು ಇ-ಮೇಲ್ ಮೂಲಕ ವಿಚಾರಿಸಿದ ಮಾಹಿತಿಯನ್ನು ನೀಡುವಂತೆ ಪೊಲೀಸರು ನನ್ನನ್ನು ಕೇಳಿಲ್ಲ.

13. ನಮ್ಮ ಬ್ಯಾಂಕಿನಲ್ಲಿ ಪಾಸ್ ಪುಸ್ತಕ ಎಂಟ್ರಿ ಮಾಡಿಸಲು ಪ್ರತ್ಯೇಕ ಮೆಷಿನ್ ಇದೆ ಎಂದರೆ ಸರಿ. ಜುಲೈ 2022 ರಲ್ಲಿ ಯಂತ್ರದ ಮೂಲಕ ಪಾಸ್ ಪುಸ್ತಕ ಎಂಟ್ರಿ ಮಾಡಿಸಲು ತಾಂತ್ರಿಕ ತೊಂದರೆ ಇದೆ ಎಂದು ನಾವು ಯಾರಿಗೂ ತಿಳಿಸಿಲ್ಲ. ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆ ಒಬ್ಬ ವ್ಯಕ್ತಿಗೆ ಸೇರಿದ ಖಾತೆ ಅಲ್ಲ ಎಂದರೆ ಸರಿ. ಸದರಿ ಖಾತೆಗೆ ಶಿವೇಗೌಡ ಎಂಬುವವರು ಸಹ ಒಬ್ಬ ಖಾತೆದಾರರು ಎಂದರೆ ಸರಿ. ಪೊಲೀಸರಿಗೆ ನೀಡಿದ ಉತ್ತರದ ಜೊತೆ ಚಾಸಾ.1 ರವರಿಗೆ ಸೇರಿದ KYC ದಾಖಲೆಗಳನ್ನು ನಾನು ನೀಡಿಲ್ಲ. ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆಯನ್ನು 3 ಜನ ನಿರ್ವಹಿಸಬೇಕು ಎಂದು ನಿಗಧಿಯಾಗಿತ್ತು. ವಿ.ಕೆ. ಶಿವೇಗೌಡ ಸದರಿ ಶಾಲೆಯ ಅದ್ಯಕ್ಷರಾಗಿದ್ದರು. ವಹಿದಾ ಬಾನು ರವರ ಮತದಾನದ ಗುರುತಿನ ಚೀಟಿಯಲ್ಲಿ

ಆಕೆಯ ಫೋನ್ ನಂಬರ್ ಕಂಡು ಬರುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಖಾತೆಯನ್ನು ತೆರೆಯುವಾಗ ಮೊಬೈಲ್ ನ ಸಂಖ್ಯೆ ಅವಶ್ಯಕತೆ ಇಲ್ಲದ ಕಾರಣ ಆ 3 ಜನರ ಮೊಬೈಲ್ ಸಂಖ್ಯೆಯನ್ನು ನಾವು ಪಡೆದುಕೊಂಡಿಲ್ಲ.

14. ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆಯನ್ನು ತೆರೆಯುವಾಗ ಆ 3 ಜನರ ಮೊಬೈಲ್ ನಂಬರ್ ಅನ್ನು ಖಾತೆಗೆ ಲಿಂಕ್ ಮಾಡಿದ್ದರೋ ಇಲ್ಲವೋ ಎಂದು ಪರಿಶೀಲಿಸಿ ಹೇಳಬಲ್ಲೆ. ಪ್ರತಿಯೊಂದು ಬ್ಯಾಂಕಿಗೆ ತಮ್ಮದೇ ಆದ IFSC Code ಇರುತ್ತದೆ ಎಂದರೆ ಸರಿ. ಖಾತೆಯಿಂದ ಹಣವನ್ನು ವರ್ಗಾವಣೆ ಮಾಡಲು IFSC Code ನ ಅವಶ್ಯಕತೆ ಇರುತ್ತದೆ ಎಂದರೆ ಸರಿ. Duplicate pass book ನೀಡುವಾಗ ಅದಕ್ಕೆ ತಗಲುವ ವೆಚ್ಚವನ್ನು ಪಾಸ್ ಪುಸ್ತಕದಲ್ಲಿ ತೋರಿಸುತ್ತೇವೆ ಎಂದರೆ ಸರಿ. ಖಾತೆ ಜಂಟಿಯಾಗಿ ಇದ್ದರೆ account statement extract ನಲ್ಲಿ ಜಂಟಿ ಖಾತೆದಾರರ ಎಲ್ಲರ ಹೆಸರುಗಳು ಬರುತ್ತವೆ ಎಂದರೆ ಸರಿಯಲ್ಲ. ಖಾತೆ ಜಂಟಿಯಾಗಿ ಇದ್ದರೆ account statement extract ನಲ್ಲಿ ಜಂಟಿ ಖಾತೆದಾರರ ಎಲ್ಲರ ಹೆಸರುಗಳು ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಇಬ್ಬರ ಹೆಸರಿಗೆ ಜಂಟಿ ಖಾತೆ ಇದ್ದರೆ ಮಾತ್ರ ಅವರ ಹೆಸರುಗಳು account statement extract ನಲ್ಲಿ ಬರುತ್ತದೆ, ಇಬ್ಬರಿಗಿಂತ ಹೆಚ್ಚು ಖಾತೆದಾರರು ಇದ್ದರೆ ಎಲ್ಲರ ಹೆಸರಿನಲ್ಲಿ account statement extract ನಲ್ಲಿ ಬರುವುದಿಲ್ಲ ಎಂದು ನುಡಿಯುತ್ತಾರೆ.

15. ನಾನು ಪೊಲೀಸರು ನೀಡಿದ ಉತ್ತರದಲ್ಲಿ Joint account with authorized signatories ಎಂದು ಹೇಳಿದ್ದೇನೆ ಎಂದರೆ ಸರಿ. ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆಯನ್ನು ತೆರೆದ ಬಳಿಕ ನಂತರದಲ್ಲಿ ಖಾತೆದಾರರ ಮೊಬೈಲ್ ಸಂಖ್ಯೆಗಳನ್ನು ಆ ಖಾತೆಗೆ ಲಿಂಕ್ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಮೊಬೈಲ್ ಸಂಖ್ಯೆಗಳನ್ನು ಲಿಂಕ್ ಮಾಡಿದ ಬಗ್ಗೆ ಪರಿಶೀಲಿಸಿ ಆ ಬಗ್ಗೆ ಮಾಹಿತಿಯನ್ನು ಪೊಲೀಸರಿಗೆ ನಾನು ನೀಡಿಲ್ಲ.

16. ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು ಶಾಲೆಯ ಖಾತೆಯ ಅಧಿಕೃತ ಖಾತೆದಾರರು ಬದಲಾವಣೆಯಾದ ಮಾಹಿತಿ ನನಗೆ ತಿಳಿದಿರುತ್ತದೆ. ಅಧಿಕೃತ ಖಾತೆದಾರರು ಯಾವಾಗ ಬದಲಾವಣೆಯಾಗಿದ್ದರು ಎಂದು ನನಗೆ ನೆನಪಿಲ್ಲ, ಪರಿಶೀಲನೆ ಮಾಡಬೇಕು. ಪಾನ್ ಹೊಂದಿಲ್ಲದವರು ಮಾತ್ರ ಫಾರಂ ನಂಬರ್ 60 ನೀಡಬೇಕು ಎಂದರೆ ಸರಿ. ದಿಃ 09.08.2005 ರಲ್ಲಿ ಪಡೆದುಕೊಂಡ ಫಾರಂ ನಂಬರ್ 60 ಯಲ್ಲಿ ಶಿವೇಗೌಡರ ರವರ ಹೆಸರು ಕಂಡು ಬರುತ್ತದೆ ಎಂದರೆ ಸರಿ. ಚಾಸಾ.1 ರವರಿಂದ ಆ ದಿನಾಂಕದಂದು ಫಾರಂ ನಂಬರ್ 60 ಪಡೆದುಕೊಂಡ ದಾಖಲೆ ಯಾವುದು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ನಿ.ಪಿ.21 ದಾಖಲೆಯನ್ನು ನೋಡಿ 3 ಜನರಿಂದ ಆ ದಾಖಲೆಯನ್ನು ಪಡೆದುಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನಿ.ಪಿ.21 ರಲ್ಲಿ ಚಾಸಾ.1 ರವರ ಸಹಿ ಇಲ್ಲ ಎಂದರೆ ಸಾಕ್ಷಿ ಸಹಿ ಇದೆ ಎಂದು ನುಡಿಯುತ್ತಾರೆ.

17. ನಿ.ಪಿ.24 ವಹಿದಾ ಬಾನು ರವರ ವೈಯಕ್ತಿಕ ಖಾತೆಗೆ ಸಂಬಂಧಿಸಿದ್ದು. ನಿ.ಪಿ.24 ರಲ್ಲಿ 3 ನೇ ಪ್ರಶ್ನೆಗೆ ಮೊಬೈಲ್ ಸಂಖ್ಯೆ ಯಾವ ದಿನಾಂಕದಂದು ಆ ಖಾತೆಗೆ ಲಿಂಕ್ ಆಗಿದೆ ಎಂದು ಬರೆದಿಲ್ಲ ಎಂದರೆ ಸರಿ. ನಿ.ಪಿ.24 ಪತ್ರವನ್ನು ಪೊಲೀಸರಿಗೆ ಬರೆದ ನಂತರ ನಮ್ಮ ಮೇಲಾಧಿಕಾರಿಗಳಿಂದ ಯಾವುದೇ ಮಾಹಿತಿ ಬಂದಿದ್ದು ನನಗೆ ನೆನಪಿಲ್ಲ. ಒಂದು ವೇಳೆ ನಮ್ಮ ಮೇಲಾಧಿಕಾರಿಗಳಿಂದ ಆ ರೀತಿ ಮಾಹಿತಿ ಬಂದಿದ್ದರೆ ಆ ಮಾಹಿತಿಯನ್ನು ಪೊಲೀಸರಿಗೆ ತಿಳಿಸುತ್ತಿದ್ದೆವು ಎಂದರೆ ಸಾಕ್ಷಿ ಮೇಲಾಧಿಕಾರಿಗಳಿಂದ ವಹಿದಾ ಬಾನು ರವರ ಖಾತೆಗೆ ಸಂಬಂಧಿಸಿದಂತೆ ಬಂದಿಲ್ಲ, ಅಕ್ಷರ ದಾಸೋಹ ಖಾತೆಗೆ ಸಂಬಂಧಿಸಿದಂತೆ ಕೆಲವೊಂದು ಮಾಹಿತಿ ನಮ್ಮ ಮೇಲಾಧಿಕಾರಿಗಳಿಂದ ಬಂದಿತ್ತು ಎಂದು ನುಡಿಯುತ್ತಾರೆ. ಮೇಲಾಧಿಕಾರಿಗಳು ನೀಡಿದ ಮಾಹಿತಿಯಂತೆಯೇ ಮಾಹಿತಿಯನ್ನು ನಾವು ಪೊಲೀಸರಿಗೆ ನೀಡಿದ್ದೆವು ಎಂದು ನುಡಿಯುತ್ತಾರೆ. ನಮ್ಮ ಮೇಲಾಧಿಕಾರಿಗಳು ಬ್ಯಾಂಕಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಮಾಹಿತಿಯನ್ನು ಪೊಲೀಸರಿಗೆ ನೀಡಿ ಎಂದು ಹೇಳಿದ ಕಾರಣ ಅದೇ ರೀತಿ ಮಾಹಿತಿಯನ್ನು ನಾವು ಪೊಲೀಸರಿಗೆ ನೀಡಿದ್ದೇವೆ ಎಂದರೆ ಸುಳ್ಳು.

18. ನಿ.ಪಿ.24 ರಲ್ಲಿ 3 ನೇ ಪ್ರಶ್ನೆಯ ಬಳಿ ತೋರಿಸಿರುವ ಮೊಬೈಲ್ ಸಂಖ್ಯೆಯ ಸಿಮ್ ಯಾರ ಹೆಸರಿನಲ್ಲಿ ಇದೆ ಎಂದು ನಾವು ಪರಿಶೀಲಿಸಿಲ್ಲ. ನಿ.ಪಿ.24 ರಲ್ಲಿ ನಮೂದಿಸಿದ ಮೊಬೈಲ್ ಸಂಖ್ಯೆ ವಹಿದಾ ಬಾನು ರವರಿಗೆ ಸೇರಿದ್ದು ಎಂದು ನಾವು ಪರಿಶೀಲಿಸಿಲ್ಲ ಎಂದರೆ ಸಾಕ್ಷಿ ಯಾವುದೇ ಬ್ಯಾಂಕಿನವರು ಆ ಸಂಖ್ಯೆ ಯಾರಿಗೆ ಸೇರಿದ್ದು ಎಂದು ವಿಚಾರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಮೊಬೈಲ್ ನಂಬರ್ ಅನ್ನು ಯಾರ ಖಾತೆಗಾದರು ಸೇರಿಸಬಹುದಾ ಎಂದರೆ ಸಾಕ್ಷಿ ಖಾತೆದಾರರು ಬಂದು ಮೊಬೈಲ್ ಸಂಖ್ಯೆಯನ್ನು ತಮ್ಮ ಖಾತೆಗೆ ಸೇರಿಸಿ ಎಂದು ಕೇಳಿದರೆ ನಾವು ಆ ಮೊಬೈಲ್ ಸಂಖ್ಯೆಯನ್ನು ಖಾತೆಗೆ ಅಳವಡಿಸುತ್ತೇವೆ ಎಂದು ನುಡಿಯುತ್ತಾರೆ. ನಿ.ಪಿ.24 ರಲ್ಲಿ ಕಾಣಿಸಿರುವ ಮೊಬೈಲ್ ಸಂಖ್ಯೆ ವಹಿದಾ ಬಾನು ರವರಿಗೆ ಸೇರಿಲ್ಲ, ಮತ್ತು ಅವರು ಆ ಮೊಬೈಲ್ ಸಂಖ್ಯೆಯನ್ನು ಆ ಖಾತೆಗೆ ಸೇರಿಸುವಂತೆ ಕೋರಿಲ್ಲ, ನಾವು ಪೊಲೀಸರ ಕೋರಿಕೆಯ ಮೇರೆಗೆ ಆ ಮೊಬೈಲ್ ಸಂಖ್ಯೆಯನ್ನು ನಿ.ಪಿ.24 ರಲ್ಲಿ ನಮೂದು ಮಾಡಿದ್ದೇವೆ ಎಂದರೆ ಸುಳ್ಳು.

19. ವಹಿದಾ ಬಾನು ರವರ ಖಾತೆಯಲ್ಲಿ ದಿಃ 28.04.2022 ರಿಂದ ದಿಃ 17.07.2022 ರವರೆಗೆ ಯಾವುದೇ ಹಣದ ವಹಿವಾಟು ಆಗಿಲ್ಲ ಎಂದು ನಿ.ಪಿ.24 ಅನ್ನು ನೀಡಿದ್ದೇವೆ ಎಂದರೆ ಸಾಕ್ಷಿ ಸಣ್ಣ ಮೊತ್ತದ ವಹಿವಾಟು ಆಗಿದೆ ಎಂದು ನುಡಿಯುತ್ತಾರೆ. ಪೊಲೀಸರು relevant amount ಎಂಬ ಬಗ್ಗೆ ಮಾಹಿತಿ ನೀಡಿ ಎಂದು ನಮಗೆ ಕೋರಲಿಲ್ಲ ಎಂದರೆ ಸರಿ. ನಿ.ಪಿ.19 ರಲ್ಲಿ ಕಾಣಿಸಿರುವ IFSC Code ಗಳು ಬೇರೆ ಬೇರೆ ಇವೆ ಎಂದರೆ ಸಾಕ್ಷಿ IFSC Code ಗಳು ತಪ್ಪಾಗಿವೆ ಎಂದು ನುಡಿಯುತ್ತಾರೆ. ನಿ.ಪಿ.19 ಅನ್ನು ಸೃಷ್ಟಿಸಿ ನೀಡಿರುವುದರಿಂದ ಅದರಲ್ಲಿ IFSC Code ಗಳನ್ನು ತುರಾತುರಿಯಲ್ಲಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.19 ಅನ್ನು ಪೊಲೀಸರಿಗೆ ನೀಡಿ ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ನೀಡಿದ್ದೇವೆ ಎಂದರೆ ಸರಿಯಲ್ಲ.

20. ಅಕ್ಷರ ದಾಸೋಹ (ಎಂ.ಎಂ.ಎಸ್) ಜಿ.ಎಂ.ಹೆಚ್.ಪಿ.ಎಸ್ ಗೋಣಿಬೀಡು

ಶಾಲೆಯ ಖಾತೆಯಲ್ಲಿ ಹಣವನ್ನು withdraw ಮಾಡಿಕೊಳ್ಳಲು ಲಿಮಿಟ್ ಇತ್ತಾ ಎಂದರೆ ಸಾಕ್ಷಿ ಮೊಬೈಲ್ ಬ್ಯಾಂಕಿಂಗ್ ನಲ್ಲಿ ಲಿಮಿಟ್ ಇರುತ್ತದೆ ಎಂದು ನುಡಿಯುತ್ತಾರೆ. 2022 ರಲ್ಲಿ ಉಳಿತಾಯ ಖಾತೆಯಲ್ಲಿ ಹಣವನ್ನು ಬಿಡಿಸಿಕೊಳ್ಳಲು ಲಿಮಿಟ್ ನಿಗಧಿಪಡಿಸಿರಲಿಲ್ಲ. 2022 ರಲ್ಲಿ ಹಣವನ್ನು ಉಳಿತಾಯ ಖಾತೆಯಿಂದ ಬಿಡಿಸಿಕೊಳ್ಳಲು ಲಿಮಿಟ್ ಇದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಎ.ಟಿ.ಎಂ ನಲ್ಲಿ ಮತ್ತು ಮೊಬೈಲ್ ಬ್ಯಾಂಕಿಂಗ್ ನಲ್ಲಿ ಹಣ withdraw ಮಾಡಲು ಲಿಮಿಟ್ ಇರುತ್ತದೆ ಎಂದು ನುಡಿಯುತ್ತಾರೆ. ಮೊಬೈಲ್ ಬ್ಯಾಂಕಿಂಗ್ ನಲ್ಲಿ 2022 ರಲ್ಲಿ ಖಾತೆಯಿಂದ ಹಣ withdraw ಮಾಡಲು 1 ಲಕ್ಷದ ಲಿಮಿಟ್ ನಿಗದಿಯಾಗಿತ್ತು.

21. 2022 ರಲ್ಲಿ ಮೊಬೈಲ್ ಬ್ಯಾಂಕಿಂಗ್ ನಲ್ಲಿ ಖಾತೆಯಿಂದ ಹಣ withdraw ಮಾಡಲು ಖಾತೆದಾರರು ಲಿಮಿಟ್ ನಿಗದಿಪಡಿಸುವ option ಇತ್ತು ಎಂದರೆ ಸಾಕ್ಷಿ ಬ್ಯಾಂಕು ನಿಗದಿಪಡಿಸಿರುವ 1 ಲಕ್ಷ ಹಣಕ್ಕೂ ಅಧಿಕ ಹಣ withdraw ಮಾಡುವ ಲಿಮಿಟ್ ಇರಲಿಲ್ಲ ಎಂದು ನುಡಿಯುತ್ತಾರೆ. ಅಕ್ಷರ ದಾಸೋಹ ಖಾತೆಯಿಂದ ಮೊಬೈಲ್ ಬ್ಯಾಂಕಿಂಗ್ ಮೂಲಕ ಆ ಖಾತೆಯನ್ನು ನಿರ್ವಹಿಸುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅಕ್ಷರ ದಾಸೋಹ ಖಾತೆಯನ್ನು ಮೊಬೈಲ್ ಬ್ಯಾಂಕಿಂಗ್ ಮೂಲಕ ನಿರ್ವಹಿಸುವ ಯಾವುದೇ ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ. ಅಕ್ಷರ ದಾಸೋಹ ಖಾತೆಯನ್ನು ಮೊಬೈಲ್ ಬ್ಯಾಂಕಿಂಗ್ ಮೂಲಕ ಯಾರು ನಿರ್ವಹಿಸುತ್ತಾರೆ ಎಂಬ ವಿವರ ನಮಗೆ ತಿಳಿಯುತ್ತದೆ ಎಂದರೆ ಸಾಕ್ಷಿ ಯಾವ ಮೊಬೈಲ್ ಖಾತೆಗೆ ರಿಜಿಸ್ಟರ್ ಮಾಡಿಸಿರುತ್ತಾರೋ ಆ ಖಾತೆದಾರರು ಮೊಬೈಲ್ ಬ್ಯಾಂಕಿಂಗ್ ಬಳಸುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರಿಗೆ ನೀಡಿದ ಮಾಹಿತಿಯಲ್ಲಿ ಅಕ್ಷರ ದಾಸೋಹ ಖಾತೆಗೆ ಯಾವುದೇ ಪೋನ್ ನಂಬರ್ ಲಿಂಕ್ ಆಗಿಲ್ಲ ಎಂಬ ಮಾಹಿತಿಯನ್ನು ನೀಡಿದ್ದೇವೆ ಎಂದರೆ ಸರಿ. ನಾವು ಮಾಡಿರುವ ತಪ್ಪನ್ನು ಮರೆಮಾಚಲು ತಪ್ಪು ಮಾಹಿತಿಯನ್ನು ನೀಡಿ ನ್ಯಾಯಾಲಯದ ಮುಂದೆ ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ.

22. ಆರೋಪಿಯನ್ನು ನಾನು ಇದುವರೆಗೂ ನೋಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ